


- ಈ ರೀತಿ ಚತುರ್ಥಾಂಶ ಪದ್ಧತಿಯಂತೆ ಅರ್ಧ ಕೆ.ಜಿ. ಮಣ್ಣು ಸಿಗುವರೆಗೂ ಮಾಡಬೇಕು.
- ಆನಂತರ ಅರ್ಧ ಕೆ.ಜಿ. ಮಣ್ಣನ್ನು ಪ್ಲಾಸ್ಟಿಕ್ ಅಥವಾ ಬಟ್ಟೆಯ ಚೀಲದಲ್ಲಿ ಶೇಖರಿಸಿ, ಅದರೊಂದಿಗೆ ಸಂಗ್ರಹಿಸಿದ ಸ್ಥಳದ ವಿವರಗಳನ್ನೊಳಗೊಂಡ ಚೀಟಿಯನ್ನು ಸಹ ಚೀಲದಲ್ಲಿ ಇರಿಸಬೇಕು.
- ಮಣ್ಣನ್ನು ಸಮಾನವಾಗಿ ನಾಲ್ಕು ಭಾಗ ಮಾಡಿ, ವಿರುದ್ಧ ದಿಕ್ಕಿನ ಎರಡು ಭಾಗದ ಮಣ್ಣನ್ನು ತೆಗೆದು ಹಾಕಿ ಉಳಿದ ಮಣ್ಣನ್ನು ಮತ್ತೆ ಸೇರಿಸಿ ಹಿಂದೆ ಮಾಡಿದ ರೀತಿ ಮಾಡಬೇಕು.
- ಸಂಗ್ರಹಿಸಿದ ಮಣ್ಣಿನಲ್ಲಿ ತೇವಾಂಶ ಜಾಸ್ತಿ ಇದ್ದರೆ ಅದನ್ನು ನೆರಳಿನಲ್ಲಿ ಒಣಗಿಸಿ ಪ್ರಯೋಗಾಲಯಕ್ಕೆ ಕಳುಹಿಸಬೇಕು.

## ಮಣ್ಣು ಮಾದರಿ ತೆಗೆಯುವಾಗ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು

- ಜಮೀನುಗಳಿಗೆ ಸಾವಯವ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಹಾಕುವ ಪೂರ್ವದಲ್ಲಿ ಮಣ್ಣಿನ ಮಾದರಿ ತೆಗೆಯಬೇಕು.
- ಕೊಟ್ಟಿಗೆ ಗೊಬ್ಬರ ಸಂಗ್ರಹಿಸದ ಸ್ಥಳದ ಹತ್ತಿರ, ಬದುಗಳ ಹತ್ತಿರ, ನೀರು ನಿಂತಿರುವ ಜಾಗ, ರಸ್ತೆಗಳ ಸಮೀಪ, ವಿದ್ಯುತ್ ಕಂಬದ ಹತ್ತಿರ, ದೊಡ್ಡ ಗಿಡಗಳ ಕೆಳಗೆ / ನೆರಳಿನಲ್ಲಿ, ರಾಸಾಯನಿಕ ಗೊಬ್ಬರ ಬಿದ್ದ ಸ್ಥಳಗಳಲ್ಲಿ ಮಾದರಿಗಳನ್ನು ತುಂಬಬಾರದು.
- ಮಾದರಿಯನ್ನು ತೆಗೆಯುವ ಮೊದಲು, ಮಾದರಿ ತೆಗೆಯುವ ಸಾಮಾಗ್ರಿಗಳಾದ ಗುದ್ದಲಿ, ಸಲಿಕೆ ಇವುಗಳನ್ನು ಸರಿಯಾಗಿ ನೀರಿನಲ್ಲಿ ತೊಳೆದು ಒಣಗಿಸಿ ಉಪಯೋಗಿಸಬೇಕು.

## ಮಣ್ಣಿನ ಫಲವತ್ತತೆಯನ್ನು ನಿರ್ಧರಿಸುವ ಪೋಷಕಾಂಶಗಳ ಪ್ರಮಾಣ

| | ಹುಳಿ | ತಟಸ್ಥ | ಕ್ಷಾರ |
|---|---|---|---|
| ರಸಸಾರ | <6.5 | 6.5-8.5 | >8.5 |
| | ಸಾಮಾನ್ಯ | ಅಪಾಯಕಾರಿ | ಹಾನಿಕಾರಕ |
| ಲವಣಾಂಶ | <1 | 1.0-2.0 | >2.0 |

| ಲಭ್ಯವಿರುವ ಪೋಷಕಾಂಶಗಳ ಪ್ರಮಾಣ (ಕೆ.ಜಿ. / ಹೆಕ್ಟೇರಿಗೆ) | | | |
|---|---|---|---|
| ಪೋಷಕಾಂಶಗಳು | ಕಡಿಮೆ | ಮಧ್ಯಮ | ಹೆಚ್ಚು |
| ದೊರೆಯುವ ಸಾರಜನಕ | <280 | 280-560 | >560 |
| ದೊರೆಯುವ ರಂಜಕ | <22.9 | 22.9-56.33 | >56.33 |
| ದೊರೆಯುವ ಪೊಟ್ಯಾಶ್ | <141 | 141-336 | >336 |

(ಆಧಾರ ಕೃ.ವಿ.ವಿ., ಬೆಂಗಳೂರು)

ಮಣ್ಣು ಪರೀಕ್ಷೆ ಆಧಾರದ ಮೇಲೆ ಸಮಸ್ಯಾತ್ಮಕ ಮಣ್ಣುಗಳಾದ ಹುಳಿ ಮಣ್ಣಿಗೆ ಶಿಫಾರಸ್ಸು ಮಾಡಿರುವ ಪ್ರಮಾಣದಲ್ಲಿ ಸುಣ್ಣ ಸೇರಿಸುವುದು ಮತ್ತು ಕ್ಷಾರ ಮಣ್ಣಾದಲ್ಲಿ ಶಿಫಾರಸ್ಸು ಮಾಡಿರುವ ಪ್ರಮಾಣದಲ್ಲಿ ಜಿಪ್ಸಂ ಸೇರಿಸಬೇಕಾಗುತ್ತದೆ. ಮಣ್ಣು ಪರೀಕ್ಷೆಯ ಫಲಿತಾಂಶಗಳಿಂದ ಬೆಳೆಗೆ ಬೇಕಾದ ರಸಗೊಬ್ಬರಗಳನ್ನು ಶಿಫಾರಸ್ಸು ಮಾಡಲು ಪರಾಮರ್ಶಿಸುವಾಗ ನೀರಾವರಿಗೆ ಉಪಯೋಗಿಸುವ ನೀರಿನ ಗುಣಮಟ್ಟವೂ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ ನೀರಿನ ಮಾದರಿಯನ್ನು ಸಹ ಮಣ್ಣಿನ ಮಾದರಿಯೊಡನೆ ಕಳುಹಿಸುವುದು ಸೂಕ್ತ. ಮಣ್ಣು ಮತ್ತು ನೀರು ಪರೀಕ್ಷೆ ಮಾಡಿಸುವುದರಿಂದ ರೈತರು ತಮ್ಮ ಜಮೀನಿನ ಲೋಪ-ದೋಷಗಳನ್ನು ಸರಿಪಡಿಸಿಕೊಳ್ಳುವುದಲ್ಲದೇ, ಮಣ್ಣಿನ ಫಲವತ್ತತೆಯನ್ನು ಕಾಪಾಡುವುದರೊಂದಿಗೆ ಇಳುವರಿಯಲ್ಲಿ ನಿಶ್ಚಿತ ಮಟ್ಟದ ಗುರಿಯನ್ನು ಮುಟ್ಟಬಹುದಾಗಿದೆ.

| ಯಾವುದೇ ಬೆಳೆಗೆ ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರ (ಹೆಕ್ಟೇರ್‌ಗೆ) | ಕಡಿಮೆ ಫಲವತ್ತತೆ ಇದ್ದಲ್ಲಿ ಹೆಚ್ಚಿಸಬೇಕಾದ ಪ್ರಮಾಣ (ಹೆಕ್ಟೇರ್‌ಗೆ) | ಅಧಿಕ ಫಲವತ್ತತೆ ಇದ್ದಲ್ಲಿ ಕಡಿಮೆ ಮಾಡಬೇಕಾದ ಪ್ರಮಾಣ (ಹೆಕ್ಟೇರ್‌ಗೆ) |
|---|---|---|
| **ಸಾರಜನಕ** | | |
| 50 ಕೆ.ಜಿ. | ಬದಲಾವಣೆ ಇಲ್ಲ | ಬದಲಾವಣೆ ಇಲ್ಲ |
| 51-100 ಕೆ.ಜಿ. | +12.5 ಕೆ.ಜಿ. | -12.5 ಕೆ.ಜಿ. |
| 101-115 ಕೆ.ಜಿ. | +25 ಕೆ.ಜಿ. | -25 ಕೆ.ಜಿ. |
| **ರಂಜಕ** | | |
| 25 ಕೆ.ಜಿ. ಗಿಂತ ಕಡಿಮೆ | ಬದಲಾವಣೆ ಇಲ್ಲ | ಬದಲಾವಣೆ ಇಲ್ಲ |
| 26-75 ಕೆ.ಜಿ. | +12.5 ಕೆ.ಜಿ. | -12.5 ಕೆ.ಜಿ. |
| 76-125 ಕೆ.ಜಿ. | +25 ಕೆ.ಜಿ. | -25 ಕೆ.ಜಿ. |
| **ಪೊಟ್ಯಾಷ್** | | |
| 25 ಕೆ.ಜಿ. | ಬದಲಾವಣೆ ಇಲ್ಲ | ಬದಲಾವಣೆ ಇಲ್ಲ |
| 26-50 ಕೆ.ಜಿ. | +12.5 ಕೆ.ಜಿ. | -12.5 ಕೆ.ಜಿ. |
| 51-100 ಕೆ.ಜಿ. | +25 ಕೆ.ಜಿ. | -25 ಕೆ.ಜಿ. |

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ**

**ಐ.ಸಿ.ಎ.ಆರ್ - ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ**

ಕಂಕನಾಡಿ, ಮಂಗಳೂರು-575 002

ಫೋನ್: 0824-2431872, ಫ್ಯಾಕ್ಸ್: 0824-2430060

E-mail: kvkdk@rediffmail.com Website: www.kvkdk.org

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**

**ಐ.ಸಿ.ಎ.ಆರ್ - ಕೃಷಿ ವಿಜ್ಞಾನ ಕೇಂದ್ರ ದಕ್ಷಿಣ ಕನ್ನಡ**

# ಮಣ್ಣು ಪರೀಕ್ಷೆ ಮಹತ್ವ





**ತಾಂತ್ರಿಕ ಮಾಹಿತಿ**

**ಕು. ಪುನೀತ, ಬಿ.ಸಿ.**

**ಶ್ರೀ ಹರೀಶ್ ಶೆಣೈ**

**ಶ್ರೀ ತೇಜೇಶ ಎ.ಜಿ.**

**ಡಾ. ಹೆಚ್. ಹನುಮಂತಪ್ಪ**

**ಐ.ಸಿ.ಎ.ಆರ್ - ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ**

ಕಂಕನಾಡಿ, ಮಂಗಳೂರು-575 002

**2016**

# ಮಣ್ಣು ಪರೀಕ್ಷೆ ಮಹತ್ವ

## ಪ್ರಾಮುಖ್ಯತೆ

ಮಣ್ಣು ನೈಸರ್ಗಿಕವಾಗಿ ದೊರೆತಂತಹ ಅತ್ಯಮೂಲ್ಯ ವಸ್ತು. ಸಕಲ ಜೀವರಾಶಿಯನ್ನು ಹೊತ್ತಿರುವ ಭೂಮಿಯು ಸಸ್ಯಗಳಿಗೆ ಆಧಾರವನ್ನು ಕೊಡುವುದರ ಜೊತೆಗೆ ಅದರ ಬೆಳವಣಿಗೆಗೆ ಅವಶ್ಯವಿರುವ ನೀರು ಮತ್ತು ಎಲ್ಲಾ ಪೋಷಕಾಂಶಗಳನ್ನು ನೀಡುತ್ತದೆ. ಆದ್ದರಿಂದ ಬೆಳೆಗಳ ಉತ್ತಮವಾದ ಬೆಳವಣಿಗೆಗಾಗಿ ಹಾಗೂ ಪೋಷಕಾಂಶಗಳ ಕೊರತೆ ನಿವಾರಿಸಲು, ಪೋಷಕಾಂಶಗಳ ಪ್ರಮಾಣ ಮತ್ತು ರೂಪವನ್ನು ಮಣ್ಣು ಪರೀಕ್ಷೆಯು ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಭೂಮಿಯ ಮೇಲ್ಪದರದಲ್ಲಿ ಮಣ್ಣು ಒಂದೇ ಸಮನಾಗಿರದೆ ಬಣ್ಣ, ಕಣ ವಿನ್ಯಾಸ, ಕಣ ರಚನೆ ಮುಂತಾದುವುಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ವಿಭಿನ್ನವಾಗಿದೆ. ಆದ್ದರಿಂದ ಮಣ್ಣಿನ ಫಲವತ್ತತೆ ಕಾಪಾಡಲು ಹಾಗೂ ಮಣ್ಣಿನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ವೈಜ್ಞಾನಿಕವಾಗಿ ಮಣ್ಣು ಪರೀಕ್ಷೆ ಮಾಡಿಸುವುದು ಅತ್ಯಗತ್ಯ.

## ಮಣ್ಣು ಪರೀಕ್ಷೆ ಏಕೆ ಬೇಕು?

ಒಂದೇ ವ್ಯವಸಾಯ ಜಮೀನಿನಲ್ಲಿ ನಿರಂತರವಾಗಿ ಬೆಳೆ ಬೆಳೆಯುವುದರಿಂದ ಮಣ್ಣಿನಲ್ಲಿರುವ ಪೋಷಕಾಂಶಗಳೆಲ್ಲ ಬೆಳೆಗಳ ಬೆಳವಣಿಗೆಗಾಗಿ ಉಪಯೋಗವಾಗಿ ಮಣ್ಣಿನಲ್ಲಿ ಪೋಷಕಾಂಶಗಳ ಪ್ರಮಾಣ ಕ್ಷೀಣಿಸುತ್ತಾ ಬರುತ್ತದೆ. ಬೆಳೆ ಬೆಳೆದ ನಂತರ ಕೃಷಿ ಚಟುವಟಿಕೆಗಳಾದ ಮಾಗಿ ಉಳುಮೆ ಮುಂತಾದುವುಗಳನ್ನು ಕೈಗೊಳ್ಳದಿದ್ದರೆ ಭೂಮಿಯ ಮೇಲ್ಪದರ ಗಟ್ಟಿಯಾಗಿ ಮಣ್ಣಿನ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಕ್ರಿಯೆಗಳಲ್ಲಿ ವ್ಯತ್ಯಾಸ ಕಂಡು ಬಂದು ಮಣ್ಣು ನಿಷ್ಕ್ರಿಯವಾಗುತ್ತದೆ. ಈ ನಿಟ್ಟಿನಲ್ಲಿ ಮಣ್ಣು ಪರೀಕ್ಷೆ ಅಗತ್ಯ. ಎಲ್ಲಾ ಬೆಳೆಗೂ ಶಿಫಾರಸ್ಸು ಮಾಡಿದ ಗೊಬ್ಬರದ ಪ್ರಮಾಣ ಒಂದೇ ರೀತಿ ಇರದ ಕಾರಣ ಮಣ್ಣು ಪರೀಕ್ಷೆ ಮಾಡಿಸಿ, ಮಣ್ಣಿನ ಫಲವತ್ತತೆಯ ಆಧಾರದ ಮೇಲೆ ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಎಷ್ಟು ಗೊಬ್ಬರ ಕೊಡಬೇಕೆಂದು ತಿಳಿದು ಬರುತ್ತದೆ. ಕೆಲವೊಂದು ಪೋಷಕಾಂಶಗಳು ಹೆಚ್ಚಿನ ಪ್ರಮಾಣದಲ್ಲಿ ಮಣ್ಣಲ್ಲಿ ಸಿಗುತ್ತವೆ ಅಂತಹ ಪೋಷಕಾಂಶಗಳನ್ನು ಮತ್ತೆ ಸೇರಿಸುವುದರಿಂದ ಹೆಚ್ಚಿನ ಗೊಬ್ಬರ ಹಾಕಿದಂತೆ ಆಗುತ್ತದೆ, ಹಣವು ವ್ಯರ್ಥವಾಗುತ್ತದೆ. ಆದ ಕಾರಣ ಮಣ್ಣಿನ ಫಲವತ್ತತೆ, ಇಳುವರಿ ಮತ್ತು ಆರ್ಥಿಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ರಾಸಾಯನಿಕ ಗೊಬ್ಬರ ಕೊಡುವುದಕ್ಕೂ ಮುಂಚೆ ಮಣ್ಣು ಪರೀಕ್ಷೆ ಮಾಡಿಸುವುದು ಮುಖ್ಯ.

## ಮಣ್ಣು ಪರೀಕ್ಷೆಯ ಪ್ರಯೋಜನಗಳು

1. ಮಣ್ಣು ಆಮ್ಲೀಯ, ಕ್ಷಾರ ಅಥವಾ ಸಮಸ್ಥಿತಿಯಲ್ಲಿದೆಯೇ ಎಂಬುದನ್ನು ತಿಳಿಯಬಹುದು.
2. ಮಣ್ಣಿನಲ್ಲಿರುವ ಲವಣಾಂಶಗಳ ಪ್ರಮಾಣ, ಸಸ್ಯಗಳಿಗೆ ಹಾನಿಕಾರಕವಾಗಿದೆಯೇ ಇಲ್ಲವೇ ಎಂದು ನಿಖರವಾಗಿ ತಿಳಿಯಬಹುದು.
3. ಮಣ್ಣಿನಲ್ಲಿ ಸಸ್ಯಗಳಿಗೆ ಅವಶ್ಯವಾಗಿ ಬೇಕಾಗಿರುವ ಪೋಷಕಾಂಶಗಳು ಯಾವ ಪ್ರಮಾಣದಲ್ಲಿವೆ ಎಂಬುದನ್ನು ನಿರ್ಧರಿಸಬಹುದು.
4. ಪೋಷಕಾಂಶಗಳ ಕೊರತೆಯನ್ನು ನಿರ್ದಿಷ್ಟವಾಗಿ ತಿಳಿದು ವೈಜ್ಞಾನಿಕವಾಗಿ ರಸಗೊಬ್ಬರಗಳನ್ನು ಪೂರೈಕೆ ಮಾಡಿ ಕೊರತೆಯನ್ನು ಹೋಗಲಾಡಿಸಬಹುದು.
5. ಫಲವತ್ತತೆ ಕಡಿಮೆ ಇದ್ದಲ್ಲಿ ಅಥವಾ ಲವಣಾಂಶಗಳು ಹೆಚ್ಚಿದ್ದಲ್ಲಿ ಸೂಕ್ತ ಸುಧಾರಣ ಕ್ರಮಗಳನ್ನು ಅನುಸರಿಸಲು ಸಹಾಯವಾಗುತ್ತದೆ.
6. ಮಣ್ಣಿನ ಭೌತಿಕ ಗುಣಗಳಾದ ನೀರು ಹಿಡಿದಿಟ್ಟುಕೊಳ್ಳುವಿಕೆ, ಮಣ್ಣಿನ ಸ್ವರೂಪ, ರಚನೆ, ಸಾಂದ್ರತೆಯನ್ನು ತಿಳಿದು ಮಣ್ಣಿನ ಫಲವತ್ತತೆಯ ಉತ್ತಮಪಡಿಸಬಹುದು.
7. ರೈತರು ಬೆಳೆಗೆ ಬೇಕಾಗಿರುವ ಪೋಷಕಾಂಶಗಳ ಪ್ರಮಾಣವನ್ನು ಮೊದಲೇ ತಿಳಿದು ರಸಗೊಬ್ಬರಗಳನ್ನು ಶೇಖರಣೆ ಮಾಡಬಹುದು.

## ಮಣ್ಣಿನ ಮಾದರಿಗಳನ್ನು ತೆಗೆಯಲು ಬೇಕಾಗುವ ಸಲಕರಣೆಗಳು / ವಸ್ತುಗಳು

ಜಮೀನಿನ ನಕ್ಷೆ ತೆಗೆಯಲು ಕಾಗದ, ಸಲಿಕೆ / ಹಾರೆ, ಪ್ಲಾಸ್ಟಿಕ್ ಚೀಲಗಳು, ಬುಟ್ಟಿ / ಪ್ಲಾಸ್ಟಿಕ್ ಬಕೀಟು, ಮಣ್ಣು ಹರಡಲು ಪೇಪರ್, ಪೆನ್ಸಿಲ್, ಮಾಹಿತಿ ಪತ್ರ - ರೈತನ ಹೆಸರು, ವಿಳಾಸ, ತೋಟದ / ತಾಕಿನ ಸರ್ವೆ ನಂ., ಹಿಂದೆ ತೆಗೆದ ಬೆಳೆ, ಉಪಯೋಗಿಸಿದ ಗೊಬ್ಬರ, ಮುಂದೆ ಬೆಳೆಯಬೇಕಾಗಿರೋ ಬೆಳೆ ಇತ್ಯಾದಿ.

## ಸಂಗ್ರಹಣೆ ಮಾಡುವ ಸಮಯ

ಮಣ್ಣು ಮಾದರಿ ತೆಗೆಯುವುದಕ್ಕೆ ಸೂಕ್ತವಾದ ಕಾಲ ಎಂದರೆ ಯಾವುದೇ ಹಿಂಗಾರು ಪೈರು ಕಟಾವಾದ ನಂತರ ಮಾಗಿ ಉಳುಮೆ ಮಾಡುವುದಕ್ಕೆ ಮುಂಚೆ ತೆಗೆಯಬೇಕು. ತೋಟದಲ್ಲಿ ಬೆಳೆ ಇರುವಾಗ, ಬೆಳೆಗಳ ಸಾಲುಗಳ ಮಧ್ಯದಲ್ಲಿ ಭೂಮಿಗೆ ರಸಗೊಬ್ಬರ ಹಾಕುವ ಮೊದಲು ಅಥವಾ ರಸಗೊಬ್ಬರ ಹಾಕಿದ ಆರು ತಿಂಗಳ ನಂತರ ಮಣ್ಣಿನ ಮಾದರಿ ತೆಗೆಯಬೇಕು. ಮಣ್ಣು ಪರೀಕ್ಷೆ ಕೇವಲ ಅರ್ಧ ಕೆ.ಜಿ. ಮಣ್ಣು ಬೇಕಾಗುತ್ತದೆ. ಆ ಮಣ್ಣು ತೋಟದ ಎಲ್ಲಾ ಭಾಗವನ್ನು ಪ್ರತಿನಿಧಿಸುವಂತಿರಬೇಕು. ಜಮೀನಿನ ಭೌತಿಕ ಗುಣಧರ್ಮದಲ್ಲಿ ಬದಲಾವಣೆ ಇದ್ದಲ್ಲಿ ಸಣ್ಣ ಸಣ್ಣ ಸ್ಥಳಗಳಲ್ಲಿ ಬೇರೆ ಬೇರೆಯಾಗಿ ಮಣ್ಣಿನ ಮಾದರಿ ತೆಗೆಯಬೇಕು. ಕರಾವಳಿಯಲ್ಲಿ ಹೆಚ್ಚು ಮಳೆ ಬೀಳುವುದರಿಂದ ಪ್ರತಿ ವರ್ಷ ಮಣ್ಣು ಪರೀಕ್ಷೆ ಮಾಡಿಸುವುದು ಉತ್ತಮ.



ಬೆಳೆ ಇಲ್ಲದಿರುವಾಗ ಮಣ್ಣಿನ ಮಾದರಿ ತೆಗೆಯುವ ವಿಧಾನ



ಬೆಳೆಯ ಸಾಲುಗಳ ಮಧ್ಯೆ ಮಣ್ಣಿನ ಮಾದರಿ ತೆಗೆಯುವ ವಿಧಾನ

## ಮಣ್ಣು ಮಾದರಿ ತೆಗೆಯುವ ಆಳ

ವಾರ್ಷಿಕ ಬೆಳೆಗಳು (ಭತ್ತ, ರಾಗಿ, ಶೇಂಗಾ ಇತರೆ) ಮತ್ತು ತರಕಾರಿ ಬೆಳೆಗಳಲ್ಲಿ (ಬದನೆ, ಬೆಂಡೆ, ಇತರೆ) 15-20 ಸೆಂ.ಮೀ. ಆಳದವರೆಗೆ ಹಾಗೂ ಬಹುವಾರ್ಷಿಕ ಬೆಳೆಗಳಲ್ಲಿ (ತೋಟಗಾರಿಕಾ ಬೆಳೆಗಳಲ್ಲಿ) 30-40 ಸೆಂ.ಮೀ. ರಷ್ಟು ಆಳದವರೆಗೆ ಮಣ್ಣಿನ ಮಾದರಿ ತೆಗೆಯಬೇಕು.

## ಮಣ್ಣಿನ ಮಾದರಿ ಸಂಗ್ರಹಣೆ ಮಾಡುವ ವಿಧಾನ

✦ ಮಣ್ಣು ಮಾದರಿ ತೆಗೆಯುವುದಕ್ಕೆ ಮುಂಚೆ ಜಮೀನಿನ ನಕ್ಷೆ ತಯಾರಿಸಬೇಕು.

✦ ಜಮೀನಿನ ಅಳತೆ ಮೇರೆಗೆ 5-10 ಅಂಕುಡೊಂಕಾದ ಗುರುತುಗಳನ್ನು ಮಾಡಿಕೊಳ್ಳಬೇಕು.

✦ ಮಣ್ಣಿನ ಮೇಲ್ಪದರದಲ್ಲಿರುವ ಎಲೆಗಳು, ಕಲ್ಲುಗಳನ್ನು ತೆಗೆದು, ಅನಂತರ ಸಲಿಕೆಯಿಂದ "V" ಆಕಾರದಲ್ಲಿ ತಗ್ಗನ್ನು ತೆಗೆದು ಮೇಲಿನಿಂದ ಕೆಳಗಿನ ವರೆಗೆ 1 ಇಂಚು / 2.5 ಸೆಂ.ಮೀ. ದಪ್ಪ ಮಣ್ಣನ್ನು ವಾರ್ಷಿಕ ಬೆಳೆಗಳಲ್ಲಿ 15-20 ಸೆಂ.ಮೀ. ಬಹುವಾರ್ಷಿಕ ಬೆಳೆಗಳಲ್ಲಿ 30-40 ಸೆಂ.ಮೀ. ಆಳದವರೆಗೆ ಸಂಗ್ರಹಿಸಬೇಕು.




✦ ಈ ರೀತಿ ಸಂಗ್ರಹಿಸಿದ 15-20 ಮಾದರಿ ಮಣ್ಣನ್ನು ಚೆನ್ನಾಗಿ ಮಿಶ್ರಣ ಮಾಡಿ ಕಸ ಕಡ್ಡಿ, ಹುಲ್ಲು, ಸಣ್ಣ ಕಲ್ಲುಗಳನ್ನು ಆರಿಸಿ ಬೇರ್ಪಡಿಸಬೇಕು.

✦ ಮಣ್ಣನ್ನು ಸಮಾನವಾಗಿ ನಾಲ್ಕು ಭಾಗ ಮಾಡಿ, ವಿರುದ್ಧ ದಿಕ್ಕಿನ ಎರಡು ಭಾಗದ ಮಣ್ಣನ್ನು ತೆಗೆದು ಹಾಕಿ ಉಳಿದ ಮಣ್ಣನ್ನು ಮತ್ತೆ ಸೇರಿಸಿ ಹಿಂದೆ ಮಾಡಿದ ರೀತಿ ಮಾಡಬೇಕು.